# ಶಾಸನಗಳಲ್ಲಿ ಯಾಪನೀಯ ಗಣಗಳು

**Though chalukyas respected and encouraged all the sects, it was Yapaniya sect that received more and more attention. Yapaniya sangha flourished so rapidly during this period that it reached its zenith. After the sustained royal patronage of Banavasi Kadambas, Yapaniya sangha never looked back. It grew from strength tho strength up to the period of Kalachuris and Western Chalukyas. The period between 980 and 1154 A.D. was the Golden Age of Yapaniya sangha; that was the best of time, and the year after 1184 was the worst of time for Yapaniyas.**

**Dr. KAMALA HAMPANA : Attimabbe and Chalukyas, 1995, p. 29**

ಚಾಳುಕ್ಯರ ಕಾಲದಲ್ಲಿ ಯಾಪನೀಯ ಸಂಘ ಸುವರ್ಣಯುಗದ ವ್ಯಾಪ್ತಿ ವೈಭವಗಳನ್ನು ಪಡೆಯಿತೆಂಬ ಡಾ. ಕಮಲಾ ಹಂಪನಾ ಅವರ ಹೇಳಿಕೆಯನ್ನು ಅಂದಿನ ಕಾಲದ ಶಾಸನಗಳು ಪುಷ್ಟೀಕರಿಸುತ್ತೇವೆ. ಯಪನೀಯ ಸಂಘದ ಅಧ್ಯಯನದ ಹಾಸು ದೊಡ್ಡದು; ಅದು ಒಂದು ಪಿ.ಎಚ್.ಡಿ. ಮಹಾ ಪ್ರಬಂಧದ ವಸ್ತು. ಅದರ ಕಕ್ಷೆಗೆ ಒಳಪಡುವ ಪೂರಕ ಸಾಮಗ್ರಿಯಾಗಿ,

ಯಾಪನೀಯ ಸಂಘದಲ್ಲಿ ಸಮಾವೇಶವಾಗಿದ್ದ ಗಣಗಳನ್ನು ಶಾಸನಗಳ ಆಧಾರವಿತ್ತು. ಗುರುತಿಸುವುದು ಈ ಟಿಪ್ಪಣಿಯ ಚೌಕಟ್ಟು.

ಚಾಳುಕ್ಯರ ಆಳಿಕೆಯ ಅವಧಿಯಲ್ಲಿ, ಕ್ರಿ.ಶ. ೯೭೩-೭೪ ರಿಂದ ೧೧೮೪ ರವರೆಗಿನ ಇನ್ನೂರು ವರ್ಷಗಳಲ್ಲಿ, ಅತ್ಯಂತ ಪ್ರಬಲ ಜೈನ ಸಂಘವಾದ ಯಾಪನೀಯದೊಳಗೆ ಸೇರಿದ ಗಣಗಳ ಹೆಸರುಗಳು ಶಾಸನಗಳಲ್ಲಿ ವಿಪುಲವಾಗಿ ಸಿಗುವುದರಿಂದ, ಈ ಸಂಪ್ರಬಂಧದ ಪುಟ ಪರಿಮಿತಿಗೆ ಸಂಗ್ರಹಿಸುವ ಅನಿವಾರ್ಯದಿಂದಾಗಿ, ಅವನ್ನು ಅಕಾರಾದಿ ಅನುಕ್ರಮಣಿಕೆಗೆ ಅಳವಡಿಸಿ, ಸಿಂಹಾವಲೋಕನ ಕ್ರಮದಿಂದ ಹೆಸರಿಸಲಾಗುವುದು.

೧. ಕಂಡೂರುಗಣ : ಸೌ.ಇ.ಇ. ೨೦ > ೧೮೯೮೦ ಸೌದತ್ತಿ (ಬೆಳಗಾವಿ ಜಿ/)ಪು. ೧೫-೧೭

ಅದೇ, ೧೫. ೫೪೯. ೨ ಶ. ಹುಲ್ಲೂರು (ಬಿಜಾಪುರ ಜಿ/ಮುದ್ದೇಬಿ ತಾ)

೧.೧ ಕಾಣೂರು ಗಣ: **IWG:** ೧೯೮೪: ನಂ. ೧೫೦, ೧೦ ಶ: ೪೬೮-೭೦

೧.೧.೧. ಕಾಣೂರ್ಗಣ; ಎ.ಕ. ೮, ಸೊರಬ, ೨೬೨. ೧೦೭೭, ಕುಪ್ಪಟೂರು (ಶಿ.ಜಿ)

ಸೌ.ಇ.ಇ. ೧೫, ೫೬೮. ೧೨ ಕಲ್ಕೇರಿ (ಧಾಜಿ./ಮುಂಡರಗಿತಾ.)

ಎ.ಕ. ೮(ಪ) ಅಗೂ ೧೩೩ (**C** ಅಗೂ ೯೯) ೧೦೭೯-೮೦

ಸುಳಗೋಡು ಸೋಮವಾರ, ಪು. ೧೮೬-೮೭

೧.೧.೨. ಕಾಣೂರ್ಗಣ: ಎಆರ್‌ಎಸ್‌ಐ ೧೯೨೭-೨೮. ಎಪಿ, ಇ-೫೧. ೧೨ ಶ

ಅದೇ, ೧೯೪೩-೪೪, ೪೪-೪೫. ಎಪಿ ಎಫ್ ೧. ೧೧೨೩

ಎ.ಕ. ೮-೧, ಶಿವಮೊಗ್ಗ ೪, ೧೧೨೨

೧.೧.೩. ಕ್ರಾಣೂರು ಗಣ: ಎ.ಕ. ೭-೧ (೧೯೦೨) ಶಿವಮೊ ೧೦. ೧೦೭೯. ತಟ್ಟೆ ಕೆರೆ. ಪು. ೨೧. ಸಾಲು: ೫೩

೧.೧.೪. ಕ್ರೋಣೂರ್ಗ್ಗಣ: ಸೌ.ಇ.ಇ. ೯.೨೨೧. ೧೧೨೫ ತೊಗರಕುಂಟ (ಆಂಧ್ರ: ಅನಂತಪುರಜಿ./ಧರ್ಮಾವರಂ ತಾ.)

ಕಂಡೂರುಗಣ, ಕಾಣೂರುಗಣ, ಕಾಣೂರ್ಗ್ಗಣ, ಕ್ರೂಣೂರ್ಗ್ಗಣ, ಕ್ರಾಣೂರು ಗಣ, ಕ್ರೋಣೂರ್ಗ್ಗಣ- ಇವೆಲ್ಲವೂ ಒಂದೇ ಮೂಲ ರೂಪವೂ ಉಂಟು. ಇವೆಲ್ಲವೂ ಸ್ಥಳನಾಮ ಮೂಲವಾದ ಹೆಸರುಗಳು [ನಾಗರಾಜಯ್ಯ, ಹಂಪ, ಕಾನೂ (ಣೂ) ರುಗಣ, 'ಹರತಿ ಸಿರಿ' (ಸಂ) ಲಕ್ಷ್ಮಣ್ ತೆಲಗಾವಿ, ೧೯೮೭, ೩೪೯-೫೨]. ಕನ್ನಡ ಸಾಹಿತ್ಯದಲ್ಲಿ ಕಾನೂರುಗಣವನ್ನೂ, ಈ ಗಣದ ಆಚಾರ್ಯರನ್ನೂ ಹೆಸರಿಸಿರುವ ಮೊಟ್ಟಮೊದಲನೆಯ ಕವಿಯೆಂದರೆ ಪೊನ್ನ [ಶಾಂತಿ ಪುರಾಣಂ: (ಸಂ) ನಾಗರಾಜಯ್ಯ, ಹಂಪ: ೧೯೮೨: ೧-೧೭]; ಅರ್ಹ್ಣಂಧಿ ಅರ್ಹ್ದ್ಬಲಿ ಚಂದಿನಿಂದ ಜಿನ ಚಂದ್ರ ದಾಮನಂದಿ ವೀರಣಂದಿ ಎಂಬ ಮನಿಗಳು. ಪೊನ್ನನ ತರುವಾಯ ಅವನ ಶಿಷ್ಯ ರನ್ನ ಕವಿಯು ಅಜಿತ ಪುರಾಣದಲ್ಲಿಯೂ [೧೨-೨೧] ಕರ್ಣ್ಣ ಪಾರ್ಯನು ನೇಮಿನಾಥ ಪುರಾಣ ದಲ್ಲಿಯೂ [೧-೧೭] ಕಾಣೂರುಗಣದ ಗುರುಗಳನ್ನು ಸ್ಮರಿಸಿದ್ದನೆ; ಅಲ್ಲದೆ ಅಗ್ಗಲ (ಚಂದ್ರಪ್ರಭ ಪುರಾಣ), ಒಂದನೆಯ ಮಂಗರಾಜ (ಖಗೇಂದ್ರಮಣಿ ದರ್ಪ್ಪಣ), ಶಿಶುಮಾಯಣ (ಅಂಜನಾಚರಿತೆ), ಬ್ರಹ್ಮಕವಿ (ವಜ್ರ ಕುಮಾರ ಚರಿತೆ) ಕೋಟೀಶ್ವರ (ಜೀವಂಧರ ಷಟ್ಪದಿ) ದೊಡ್ಡಯ್ಯ ಕವಿ (ಚಂದ್ರಪ್ರಭಚರಿತೆ), ಚದುರ ಚಂದ್ರಮ (ಕಾರ್ಕ್ಕಳ ಗೊಮ್ಮಟೇಶ್ವರ ಚರಿತೆ), ಇಮ್ಮಡಿ ಗುಣವರ್ಮ್ಮ (ಪುಷ್ಪದಂತ ಪುರಾಣ) ಮೊದಲಾದ ಕವಿಗಳು ಕಾಣೂರುಗಣದ ಆಚಾರ್ಯ್ಯರಿಗೆ ಕೈಮುಗಿದಿದ್ದರೆ [ನಾಗರಾಜಯ್ಯ, ಹಂಪ, ಕಾನೂ (ಣೂ) ಗ್ಗಣ, ಪೂರ್ವೋಕ್ತ ಲೇಖನ] ಅವೆಲ್ಲದರ ಚರ್ಚೆ, ಮತ್ತು ಆಯಾ ಪದ್ಯಗಳ ಉದಾಹರಣೆ ಸದಿತ ವಿವರಣೆ- ಈ ಲೇಖನದ ಅಳತೆಗೆ ಮೀರಿದ್ದು; ಅಲ್ಲದೆ ಪ್ರಸ್ತುತ ಸಂಪ್ರಬಂಧವು ಶಾಸನದ ಪ್ರಯೋಗಗಳ ವಿವೇಚನೆಗೆ ಮೀಸಲಾಗಿದೆ.

ಗಂಗರಾಜ್ಯ ಸ್ಥಾಪನೆಗೆ ಕಾರಣರಾದ ಸಿಂಹಣಂದಿ ಆಚಾರ್ಯರು ಈ ಕಾಣೂರುಗಣದ ಉತ್ತುಂಗ ಶೃಂಗ [ಎ.ಕ. ೭-೧, ಶಿವಮೊ. ೪.೧೧೨೨; ಅದೇ, ಶಿಕಾರಿ ೨೨೧. ೧೦೭೪; ಎ.ಕ.೮, ನಗರ. ೩೫. ೧೦೭೭ ಇತ್ಯಾದಿ]. ರಟ್ಟ ರಾಜ್ಯ ವಿಸ್ತಾರಕನಾದ ಮುನಿಚಂದ್ರನೂ ಇದೇ ಗಣದ ಪ್ರತಿಭೆ [ಜೆಬಿಬಿಆರ್‌ಎಎಸ್ ೧೦-೩೦ (೧೮೭೪) ನಂ. ೮. ೧೨೨೯-೩೦ ಸೌದತ್ತಿ. ಪು. ೨೬೦]. ಇನ್ನೂ ಹತ್ತಾರು ಶಾಸನಗಳಲ್ಲಿ ಇಂತಹ ಉಲ್ಲೇಖಗಳಿವೆ. ಯಾಪನೀಯ ಸಂಘಕ್ಕೆ ಸೇರಿದ ಈ ಗಣದ ವಿಚಾರದಲ್ಲಿ (ಕಾವ್ಯ ಮತ್ತು ಶಾಸನ) ಕವಿಗಳಿಗೆ ಇದ್ದ ಗೌರವಾದರಗಳು ಗಮನಿಕೆಗೆ ಅರ್ಹವಾಗಿವೆ. ಪೊನ್ನನಿಂದ ಪ್ರಾರಂಭವಾದ ಕಾಣೂರುಗಣ ಸ್ಮರಣೆ ಸುಮಾರು ೩೫೦ ವರ್ಷಗಳವರೆಗೆ ಅಕುಂಟಿತವಾಗಿ ಮುನ್ನಡೆದಿದೆಯೆಂಬುದು ತೌಲನಿಕ ಅಧ್ಯಯನದಿಂದಲೂ, ಶಾಸನಾಧಾರಗಳಿಂದಲೂ ದೃಢ ಪಡುತ್ತದೆ. ಈ ಗಣದ ಆಚಾರ್ಯಾವಳಿಯನ್ನು ತಕ್ಕಮಟ್ಟಿಗಾದರೂ ಕಾಪಿಟ್ಟವರು ಕನ್ನಡ ಕವಿಗಳು ಮತ್ತು ಕನ್ನಡ ಶಾಸನಕಾರರು. ಈ ಎರಡು ಮೂಲಗಳಿಂದ ಸಿಗುವ ಅಧಿಕೃತ ಸಾಮಗ್ರಿಯನ್ನು ಅವಲಂಬಿಸಿ ಕಾಣೂರುಗಣದ ಪರಂಪರೆಯ ಚಿತ್ರವನ್ನು ರೂಪಿಸಬಹುದು.

೨. ಕಾರೇಯ ಗಣ: ಸೌ.ಇ.ಇ. ೧೫, ೫೩೦. ೧೦೫೯; ಎ.ಇ. ೧೮. ೩೧೧. ೧೧ ಶ

ಕ.ಇ.೫, ೬೮. ೧೨೦೩ ಮುನಗುಂಡಿ (ಧಾಜಿ./ತಾ.)-(ಮಣಿಗುಂದಗೆ) ಸಾಲು: ೩೭-೩೯:
ಕ.ಇ. ೧, ೩೨.೧೨೭೧ ಧಾ.ತಾ. ಶಾಸನಗಳು. ೪೨.೧೨ ಶ ನರೇದ್ರ (ಧಾಜಿ/) ಪು.
೭೮-೭೯ ಅದೇ, ೧೪-೧೨ ಶ. ನುಗ್ಗಿ ಕೇರಿ (ಧಾಜಿ/) ಪು. ೮೩.

ಕಾರೆಯಗಣ ಎಂಬ ಹೆಸರು ವಕ್ಷಮೂಲ ನಿಷ್ಪನ್ನವಾದದ್ದು. ಕಾರೆ ಎಂಬುದು ಒಂದು ಬಗೆಯ ಹೆಣ್ಣು ಬಿಡುವ ಮುಳ್ಳುಗಿಡ (ಬೋರೆಯ ಹಣ್ಣು) ಇದು ಅಚ್ಚಗನ್ನಡ ಶಬ್ದ. ತಮಿಳಿನಲ್ಲಿ ಕಾರೈ, ಮಲೆಯಾಳದಲ್ಲಿ ಕಾರ, ತುಳುವಿನಲ್ಲಿ ಕಾರೆ, ಕೊಡಗುವಿನಲ್ಲಿ, ಕಾರೆ ಮರ-ಎಂಬ ಜ್ಞಾತಿ ರೂಪಗಳು ಚಾಲ್ತಿಯಲ್ಲಿವೆ. ಕಾರೆಗಿಡಗಳಿದ್ದ ಜೈನ ಮತ ಮಂದಿರಗಳಿದ್ದ ಕಣವೇ ಕಾರೆಯಗಣ.

ಕಾರೆಯಗಿಡದ ಮುಳ್ಳನ್ನು ಕಾರೆ ಮುಳ್ಳು ಎಂದು ಕರೆಯುವರು. ಈ ಗಣಕ್ಕೆ ಸೇರಿದ ಒಬ್ಬ ಪ್ರಾಚೀನ ಜೈನ ಗುರುವಿನ ಹೆಸರು ಮುಳ್ಳ ಭಟ್ಟಾರಕರು; ಮುಳ್ಳಿನ ಗಿಡಗಳು ಇದ್ದ ಮಠಕ್ಕೆ ಬಸದಿಗೆ ಸಂಬಂಧಿಸಿದ ಗಣದ ಗುರುಗಳು ಮುಳ್ಳ ಭಟ್ಟಾರಕರು.

ಕಾರೆಯಗಣದ ಜೈನ ಯತಿಗಳ ಪಂಗಡವು ಹತ್ತರಿಂದ ಹದಿಮೂರನೆಯ ಶತಮಾನದವರೆಗೂ ಪ್ರಚಲಿತವಾಗಿತ್ತು. ಈ ಗಣವು ಯಾಪನೀಯ ಸಂಘದ ಮೈಳಾಪತೀರ್ಥಕ್ಕೆ ಸೇರಿದ ಮುಖ್ಯ ಗಣವೂ ಹೌದು [ನಾಗರಾಜಯ್ಯ, ಹಂಪ: ಮೈಳಾಪ ತೀರ್ಥ–ಶಾಸನಗಳ ಆಧಾರ, 'ಸಮ್ಮಿಲನ' (ಸಂ) ಡಾ. ಎಂ.ಎ. ಜಯಚಂದ್ರ (೧೯೯೪): ೧೭–೨೦].

೩. ಕುಮುದಿಗಣ: ಸೌ.ಇ.ಇ. ೧೧–೧, ೭೮. ೧೦೪೫. ಮುಗದ (ಧಾಜಿ/ತಾ.)
ಅದೇ, ೧೫. ೬೧೦. ೧೨೯೦. ಗರಗ (ಧಾಜಿ/) ಅದೇ, ೬೧೮

೪. ಕೋಟಿ ಮಡುವಗಣ: ಎ.ಇ. ೯, ೬. ಪು. ೪೭. ಈ ಗಣದ ವಿಚಾರವಾಗಿ ಹೆಚಿವಿನ ಮಾಹಿತಿಗಳು ಶಾಸನಗಳಲ್ಲಿ ಇಲ್ಲ.

೫. ಪರಲೂರ ಗಣ: ಇ.ಆ. ೧೧. ೬೯. ಕ್ರಿ.ಶ. ೫೬೭. ಪು. ೬೮–೭೧; ಕ.ಇ. ೧.ಪು. ೪–೫
ಸೌ.ಇ.ಇ. ೨೦, ೯.ಸು ೮ ಶ. ಆಡೂರ (ಧಾ ಜಿ./ಹಾನಗಲ್ ತಾ.) ಪು. ೧೦ ಸಾಲು: ೨೦

ಅತ್ಯಂತ ಪ್ರಾಚೀನವಾದ–ಗಣಗಳಲ್ಲಿ ಇದು ಗಣ್ಯವಾಗಿದೆ. ಆರನೆಯ ಶತಮಾನದಿಂದ ಇದರ ಪ್ರಯೋಗ ಸಿಗುತ್ತದೆ. ಪರಲೂರ ಗಣ ಪ್ರಭಾಚಂದ್ರರ ಶಿಷ್ಯನಾದ ಶ್ರೀಪಾಲನು ಪರಲೂರ ಚೇದಿಯಕ್ಕೆ ಇಮ್ಮಡಿ ಕೀರ್ತಿವರ್ಮ ಚಕ್ರವರ್ತಿಯ [೭೪೪–೬೦] ಕಾಲದಲ್ಲಿ ದತ್ತಿ ಕೊಟ್ಟನು.

೬. ಬಲ (೪) ತ್ಕಾರ ಗಣ: ಸೌ.ಇ.ಇ. ೨೦. ೪೭. ೧೦೭೪; ಎ.ಇ. ೧೫. ೨೩. ೧೦೭೧–೭೨ ಬೆಳಗಾವಿ ಜಿ/ಗೋಕಾಕ ತಾ.) ಪು. ೨೮೭–೯೨ ಸಾಲು: ೨೪, ೧೯. ಕ.ಇ. ೫. ೩೩. ೧೧೭೬. ೧ ಗೋಲಿಹಳ್ಳಿ (ಬೆಳಗಾವಿ ಜಿ/ಖಾನಾಪುರತಾ.) ಪು. ೧೩೫–೪೦.

೬.೧ ನಂದಿಸಂಘ (ಗಣ) ಕ್ಕೆ ಸೇರಿದ ಬಲವತ್ಕಾರಗಣದ ಬೇರೆ ರೂಪಗಳು: ಬಲತ್ಕಾರ ಗಣ– ಕ.ಇ. ೩.೨. ೧೫೪೨. ಬಳಗಾಱಗಣ: ಇ. ಆ. ೪. ೧೮೦. ೧೦೪೮ ಸಾಲು: ೧೩. ಮತ್ತು ಎ.ಕ. ೭–೧ ಶಿಕಾರಿ, ೧೨೦. ೧೦೪೮. ಪು. ೨೨೫. ೧ ಇದರಲ್ಲಿ ಬಳಗಾಱಗಣದ ಮೇಷನನ್ದಿ ಭಟ್ಟಾರಕರ ಶಿಷ್ಯ ಕೇಶವನನ್ದಿ ಅಷ್ಟೋಪವಾಸಿ ಭಳಾರರ ಬಸದಿಗೆ ದಾನ ಕೊಟ್ಟ ವಿಷಯವಿದೆ. ರನ್ನ ಕವಿಯು ಬಳಗಾಱ ಕುಲದವನೆಂಬುದು ಈ ಬಳಗಾಱಗಣದ ಹಿನ್ನೆಲೆಯಲ್ಲಿ ಚಿಂತನೀಯವಾಗಿದೆ.

೬.೨ ವಳಗಾಱಗಣ: ಎ.ಇ. ೧೫. ೨೩ ೧೦೭೧–೭೨ ಗಾವರವಾಡ (ಪೂರ್ವೋಕ್ತ) ಇದು ಕೂಡ ಬಲಗಾಱಗಣದ ಇನ್ನೊಂದು ರೂಪ; ಇಲ್ಲಿ ವಕಾರ ಬಕಾರಗಳ ಬದಾಲಾವಣೆ ನಡೆದಿದೆ.

೭. ವವಿಯೂರು ಗಣ: ೧೦೬೪ . ರಾಮಚಂದ್ರಪುರ (ಆಂಧ್ರ: ಮೇಡಕ್ ಜಿ/ನರಸಾಪುರ ತಾ)

**JINAMANAGARI, October** ೧೯೯೫

೮. ವಾಸಿಯುರು ಗಣ; ಧರ್ಮಪುರಿ (ಮಹಾರಾಷ್ಟ್ರ : ಭೀರ್ ಜಿ/)ಸಂಖ್ಯೆ ೭ ಮತ್ತು ೮ ರ ವಿಚಾರ ಮಹಿತಿಗಳು ತಿಳಿಯದು.

೯. ಸೂರಸ್ಥಗಣ: **IWG:** ೧೯೮೪: ೪೪೭: ೪೪೭, ೫೧೩ (೮–೯ಶ.)

ಸೌ.ಇ.ಇ. ೧೧–೧.೩. ೧೦೭೧. ಸೊರಟೂರು (ಧಾಜಿ/ಗದಗತಾ)

ಅದೇ, ೧೧೩, ೧೦೭೪; ಸೌ.ಇ.ಇ. ೨೦. ೨೮೬. ೧೦೬೮.

ಅದೇ, ೫೨. ೧೦೭೭-೭೮ ಲಕ್ಷ್ಮೇಶ್ವರ (ಧಾ ಜಿ/ಹಾವೇರಿ ತಾ.)

ಅದೇ, ೧೮೦. ೧೧೬೮. ನದಿಹರಳಹಳ್ಳಿ ಪು. ೨೪೮

ಅದೇ, ೩೭೫, ೧೨-೧೩ಶ. ಮಾಕನೂರ (ಧಾ ಜಿ./ರಾಣೆಬೆ ತಾ.)

ಎ.ಕ.೭ (ಪ) ನಾಮಂ. ೧೯೯(೪ ನಾಮಂ ೯೪) ೧೧೪೨. ಕಸಲಗೆರೆ

ಎ.ಕ. ೮(ಪ) ಹಾ. ೧೬೫. ೨ ಶ ಶಾಂತಿಗ್ರಾಮ. ಪು. ೩೯೯

ಅದೇ, ಅಗೂ ೧೩೬ (೫ ಅಗೊ ೯೬) ೧೧೯೫.ಪು. ೧೮೯

ಎ.ಕ. ೭(ಪ) ನಾಮಂ. ೩೩ (೪ ನಾಮಂ ೧೯) ೧೧೧೮-೧೯,

ಕಂಬದ ಹಳ್ಳಿ (ಮಂಜಿ /ನಾಮಂ ತಾ) ಪು. ೨೦-೨೧

ಭೂ ಭಾಗದೊಳ್ ಪೆಂಪುವೆತ್ತುದು ಸೂರಸ್ತಗಣಂ ಪ್ರಸಿದ್ಧಂ ಅದಱೊಳ್

ಚಿತ್ರಕೂಟಾನ್ವಯಂ [ಸೌ.ಇ.ಇ. ೧೧-೧, ೧೧೧. ೧೦೭೧] ಎಂಬಂತಹ ಹೇಳಿಕೆಗಳು ಈ ಗಣದ ಹಿರಿಮೆಗೆ ಕನ್ನಡಿ ಹಿಡಿಯುತ್ತವೆ. ಶಾರ್ದೂಲವಿಕ್ರೀಡಿತವೃತ್ತ ಪದ್ಯವೊಂದ ರಲ್ಲಿ ಇದೇ ಗಣದ ಲಸದ್ಕೀರ್ತಿಪತಾಕೆಯನ್ನು ಹಾರಿಸಲಾಗಿದೆ:

ಶ್ರೀ ಸೂರಸ್ಥಗಳಣಾಂಬರದ್ಯುಮಣಿ ದುರ್ಮಾರ್ಗಾಗ್ರದ್ರಿ ವಜ್ರಾಯುಧಂ

ಶ್ರೀ ಸೂರಸ್ಥಗಣಾಂಬುರಾಸಿ ವಿಳಸತ್ತರೇಶನತ್ಯೂರ್ಜ್ಜಿತಂ

ಶ್ರೀ ಸೂರಸ್ಥಗಣೇ ಸುಚಾರು ಮುಕುರಂ ಶ್ರೀ ಚನ್ದನನ್ದಿಬ್ರತಿ

ಶ್ರೀ ಸೂರಸ್ಥ ಗಣಾಂಬುಜಾರ್ಕ್ಕನೆಸೆದಂ ಸತ್ಕೀರ್ತ್ತಿಶೌಚಾಸ್ಪದಂ ||

ಸೂರಸ್ತ (ಸ್ಥ) ಗಣವೂ ಕಾಣೂರುಗಣವೂ ಒಂದೆ ಪರಂಪರೆಯ ಕವಲುಗಳು. ಇವೆರಡೂ ಸಹ ಯಾಪನೀಯ ಸಂಘದ ಪ್ರಬಲವಾದ ಮತ್ತು ಪ್ರಸಾರಾಧಿಕ್ಯವಿರುವ ಗಣಗಳು. ಸೂರಸ್ತಗಣಕ್ಕೆ ಸೇರಿದ ಆಚಾರ್ಯರ ಪರಂಪರೆಯ ಏಳು-ಎಂಟನೆಯ ಶತಮಾನದ ವೇಳೆಗೆ ಪ್ರಸಿದ್ಧಿ ಪಡೆದಿತ್ತು. ಪೂರ್ವ ಚಾಳುಕ್ಯರ ವಿಷ್ಣುವರ್ಧನನು (೭೨೪-೪೨) ಕಟ್ಟಿಸಿದ ವಿಜಯವಾಡ (ಬೆಜವಾಡ) ದ 'ನಡುಂಬುವಸದಿ' ಗೆ ಮುಸುನಿ ಕೊಂಡ ಗ್ರಾಮವನ್ನು ಪುನರ್‌ದತ್ತಿಯಾಗಿ ನೀಡಿದವನು ಮುಮ್ಮಡಿ ವಿಷ್ಣುವರ್ಧನ (೭೧೮-೫೨) ಈ ಮುಸುನಿಕೊಂಡ ಶಾಸನದಲ್ಲಿ ಸೂರಸ್ತಗಣದ- ಕಾಣೂರು ಗಣದ ಜೈನಾಚಾರ್ಯರ ಗುರುಶಿಷ್ಯ ಪರಂಪರೆಯ ನಿರೂಪಣೆಯಿದೆ [ಎಆರ್‌ಐಎಸ್‌ಇ ೧೯೧೬-೧೭. ಸಿ.ಪಿ. ನಂ. ೧] ಸೂರಸ್ತಗಣದ ಮಾಘಾಣಂದಿ ರಿಷಿಧಿ ಕಲ್ಲನ್ನು ಸಿಂದಿಗೆಯ ಜಾಕಿಯಬ್ಬೆಯು ನಿಲ್ಲಿಸಿದಳು [ಸೌ.ಇ.ಇ. ೨೦, ೨೮೬. ೧೦೬೮] ಸೂರಸ್ಥಗಣವು ಪೆಂಪು ವೆತ್ತುದು ಮತ್ತು ಅದರಲ್ಲಿ ಚಿತ್ರ ಕೂಟಾನ್ವಯವು ಪ್ರಸಿದ್ಧವಾಗಿತ್ತು. [ಸೌ.ಇ.ಇ. ೧೧-೧, ೩. ೧೦೭೧]

ಇಷ್ಟು ವಿಶಿಷ್ಟ ಗಣಗಳಿಂದ ಮತ್ತು ಇದಕ್ಕೆ ಹೊಂದಿಕೊಂಡ ಹಲವುಗಚ್ಛಗಳಿಂದ ಕೂಡಿದ ಯಾಪನೀಯ ಸಂಘವೇ ಒಂದು ಮೂಲ ಸಂಘವಾಗಿ ಪರಿಗಣಿತವಾಗಿತ್ತು.